ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 22 ಉಪ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 25/3/21

# ಸತೀಶ್ ಕೈಗೆ ಬೆಳಗಾವಿ ಕ್ಷೇತ್ರದ ಬಿ ಫಾರಂ



**ಬೆಂಗಳೂರು:** ಬೆಳಗಾವಿ ಲೋಕಸಭೆ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಗ್ರೀನ್ ಸಿಗ್ನಲ್ ನೀಡಿದೆ. ಜತೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಜಾರಕಿಹೊಳಿ ಅವರಿಗೆ ಪಕ್ಷದ ಬಿ-ಫಾರಂ ನೀಡಿದ್ದಾರೆ. ವಿಧಾನಸೌಧದಲ್ಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ(ಸಿಎಲ್‌ಪಿ) ಕಚೇರಿಯಲ್ಲಿ ಶಿವಕುಮಾರ್ ಅವರಿಂದ ಸತೀಶ್ ಜಾರಕಿಹೊಳಿ ಬಿ-ಫಾರಂ ಸ್ವೀಕರಿಸಿದರು.

## ಹೈಕಮಾಂಡ್ ನಿರ್ಧಾರಕ್ಕೆ ಬದ್ಧ



ಶ್ರದ್ಧಾ ಅಂಗಡಿ

**ಬೆಳಗಾವಿ:** ''ಬೆಂಗಳೂರಿನಲ್ಲಿ ಈಚೆಗೆ ನಡೆದ ಬಿಜೆಪಿ ಕೋರ್ ಕಮಿಟಿಯಲ್ಲಿ ನಮ್ಮ ಕುಟುಂಬಕ್ಕೆ ಟಿಕೆಟ್ ನೀಡುವ ಬಗ್ಗೆ ಚರ್ಚೆಯಾಗಿದೆ. ಬೇರೆ ಅಭ್ಯರ್ಥಿಗಳ ಬಗ್ಗೆಯೂ ಚರ್ಚೆಯಾಗಿದೆ. ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧರಾಗಿದ್ದೇವೆ'', ಎಂದು ದಿ. ಸುರೇಶ್ ಅಂಗಡಿ ಪುತ್ರಿ ಶ್ರದ್ಧಾ ಅಂಗಡಿ ಹೇಳಿದರು. ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿ, ''ಟಿಕೆಟ್ ವಿಚಾರವಾಗಿ ದಿಲ್ಲಿಗೆ ಹೋಗಿಲ್ಲ, ಕುಟುಂಬಕ್ಕೆ ಅವಕಾಶ ಕೊಟ್ಟರೆ ಸ್ಪರ್ಧೆ ಮಾಡುತ್ತೇನೆ,'' ಎಂದರು.

## ಪಕ್ಷ ಸೂಚಿಸಿದ ಕಡೆ ಸ್ಪರ್ಧೆ

**ಕಲಬುರಗಿ:** ಯಾವ ಕ್ಷೇತ್ರದಲ್ಲಿ ನಾನು ಸ್ಪರ್ಧೆ ಮಾಡಬೇಕು ಎನ್ನುವುದನ್ನು ಸಿಎಂ ಮತ್ತು ಪಕ್ಷದ ವರಿಷ್ಠರು ಎಲ್ಲಿ ನಿರ್ಧರಿಸುತ್ತಾರೋ ಅಲ್ಲೇ ಸ್ಪರ್ಧೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಬೆಳಗಾವಿ ಲೋಕಸಭೆ, ಬಸವಕಲ್ಯಾಣ,ಮಸ್ಕಿ ಉಪ ಚುನಾವಣೆ ನಮಗೆ ಒಂದು ಸವಾಲು. ಆದ ಬಿಜೆಪಿ ಜಯ ಸಾಧಿಸಲಿದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು. ''ಸಿಎಂ ಯಡಿಯೂರಪ್ಪ ಪಕ್ಷದ ರಾಜ್ಯ ಅಧ್ಯಕ್ಷರ ಸೂಚನೆ ಮೇರೆಗೆ ಇನ್ನು ಮುಂದೆ ಹಳೆ ಮೈಸೂರು ಪ್ರದೇಶದಲ್ಲಿ ಬಿಜೆಪಿ ಬಲಗೊಳಿಸಲು ಹೆಚ್ಚು ಒತ್ತು ನೀಡುವೆ,'' ಎಂದರು.

## 'ಮಸ್ಕಿಗೆ ಮಸಿ ಬಳಿದ ಪ್ರತಾಪಗೌಡ'

**ಸಿಂಧನೂರು (ರಾಯಚೂರು):** ಅಧಿಕಾರದ ಆಸೆಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಪ್ರತಾಪಗೌಡ ಪಾಟೀಲ್ ಅವರು ಮಾರಾಟದ ವಸ್ತುವಾಗುವ ಮೂಲಕ ಮಸ್ಕಿ ಕ್ಷೇತ್ರದ ಜನರ ವಿಶ್ವಾಸಕ್ಕೆ ಮಸಿ ಬಳಿದಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ,''ರಾಜ್ಯ ಬಿಜೆಪಿ ಸರಕಾರ ಎರಡು ವರ್ಷಗಳಲ್ಲಿ ಏನೂ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಜನಪರ ಯೋಜನೆಗಳೇ ಇಲ್ಲದ ಸರಕಾರವನ್ನು ಮತದಾರರು ತಿರಸ್ಕರಿಸಲಿದ್ದಾರೆ. ಈ ಹಿಂದೆಯೂ ಬಿಜೆಪಿಯ ಕೆಲವು ಶಾಸಕರು ಪವಿತ್ರ ವಿಧಾನಸಭೆಯಲ್ಲಿಯೇ ಅಶ್ಲೀಲ ಚಿತ್ರ ನೋಡಿದ್ದರು. ಇದೀಗ ಮತ್ತೆ ಅಂಥದೇ ಪ್ರಕರಣ ಬಯಲಾಗಿದೆ. ಬಿಜೆಪಿ ಎಂದರೆ ಜನರಿಗೆ ಹೇಸಿಗೆಯಾಗಿದೆ. ಈ ರೀತಿಯ ದುರ್ವರ್ತನೆಗಳು ಬೇಸರ ಮೂಡಿಸಿವೆ'' ಎಂದು ಆರೋಪಿಸಿದರು.

## ಬಿಜೆಪಿಯ ಪ್ರತಾಪ್, ಕಾಂಗ್ರೆಸ್‌ನ ತುರುವಿಹಾಳ್, ಮಲ್ಲಮ್ಮ ನಾಮಪತ್ರ ಸಲ್ಲಿಕೆ



ಬಸವಕಲ್ಯಾಣದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಾಲಾ ಬಿ (ಮಲ್ಲಮ್ಮ) ರಾವ್ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದರು.



ಮಸ್ಕಿಯ ತಾಪಂ ಕಚೇರಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರುವಿಹಾಳ ನಾಮಪತ್ರ ಸಲ್ಲಿಸಿದರು.



ಮಸ್ಕಿಯ ತಾಪಂ ಕಚೇರಿಯಲ್ಲಿ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ್ ನಾಮಪತ್ರ ಸಲ್ಲಿಸಿದರು.